ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**444**
ಉತ್ತರಿಸಬೇಕಾದ ದಿನಾಂಕ	:	15.09.2021
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಜಿಲ್ಲೆಯಲ್ಲಿರುವ ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ಅನೇಕ ಕುಟುಂಬಕ್ಕೆ ವಸತಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮುದಾಯಕ್ಕೆ ಸೇರಿದ ಎಷ್ಟು ಕುಟುಂಬಗಳು ವಸತಿ ರಹಿತರಿದ್ದಾರೆ; (ವಿವರ ನೀಡುವುದು)	ಅಲೆಮಾರಿ /ಅರೆ ಅಲೆಮಾರಿ ಜನಾಂಗದ ವಸತಿ ರಹಿತರಿಗೆ ಪ್ರತ್ಯೇಕವಾಗಿ ಸಮೀಕ್ಷೆ ಕೈಗೊಂಡಿರುವುದಿಲ್ಲ. ಆದರೆ ಒಟ್ಟಾರೆ ವಸತಿ ರಹಿತರ ಸಮೀಕ್ಷೆ ಮಾಡಲಾಗಿದ್ದು, ಸದರಿ ಸಮೀಕ್ಷೆಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ 89232 ವಸತಿ ರಹಿತರು ಹಾಗೂ ನಗರ ಪ್ರದೇಶಗಳಲ್ಲಿ 46504 ವಸತಿ ರಹಿತರ ಸಮೀಕ್ಷೆ ಮಾಡಲಾಗಿದ್ದು ಈ ಒಟ್ಟು ಸಮೀಕ್ಷೆಯಲ್ಲಿ ಅಲೆಮಾರಿ/ಅರೆ ಅಲೆಮಾರಿ ವರ್ಗದ ವಸತಿ ರಹಿತರು ಸಹ ಸೇಪರ್ಡೆಗೊಂಡಿತ್ತಾರೆ.
(ಆ)	ಹಾಗಿದ್ದಲ್ಲಿ, ಈ ಜನಾಂಗಕ್ಕೆ ವಸತಿ ನಿರ್ಮಾಣ ಮಾಡಿ ಕೊಡುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಮಾಡಲಾಗುವುದು ; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ?	ಅಲೆಮಾರಿ /ಅರೆ ಅಲೆಮಾರಿ ಜನಾಂಗದವರನ್ನು ಒಳಗಗೊಂಡಂತೆ 14 ವಿಶೇಷ ವರ್ಗದ ವಸತಿ ರಹಿತರಿಗೆ ದೇವರಾಜ್ ಅರಸು ವಸತಿ ಯೋಜನೆಯಡಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. 2020-2021 ನೇ ಸಾಲಿನಲ್ಲಿ ಅಲೆಮಾರಿ/ಅರೆ ಅಲೆಮಾರಿ ವಸತಿ ರಹಿತರಿಗೆ ಸರ್ಕಾರವು ಆದೇಶ ಸಂಖ್ಯೆ :ವಇ 132 ಹೆಚ್ಎಹೆಚ್ 2020, ದಿನಾಂಕ:20.11.2020 ರಲ್ಲಿ, ಬೀದರ್ ಜಿಲ್ಲೆಯ, ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರಕ್ಕೆ 2500 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಇನ್ನುಳಿದ ವಸತಿ ರಹಿತರಿಗೆ ಆಯವ್ಯಯದಲ್ಲಿ ಒಸಗಿಸಲಾಗುವ ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಸಂಖ್ಯೆ :ವಇ 269 ಹೆಚ್ಎಎಂ 2021

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು